ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:65/2016

ಚಾಸಾ:7 ಪ್ರಾಸಾ:6

ದಿನಾಂಕ: 04.01.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಅಕ್ಕಮ್ಮ |
| ಗಂಡನ ಹೆಸರು | : | ಉದಯ ಕುಮಾರ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ಲ್ಯಾಬ್ ನಲ್ಲಿ ಕೆಲಸ |
| ವಾಸ ಸ್ಥಳ | : | ಗಂಗೊಳ್ಳಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನ್ಯಾಯಾಲಯದ ಮುಂದೆ ಇರುವ 2ನೇ ಆರೋಪಿ 1ನೇ ಆರೋಪಿಯ ಅಕ್ಕ. ಚಾಸಾ-1 ಮತ್ತು 1ನೇ ಆರೋಪಿಯ ನಡುವೆ ವಿವಾಹವಾಗಿರುವ ವಿಚಾರ ತಿಳಿದಿರುತ್ತದೆ. ನನ್ನ ಮತ್ತು ಚಾಸಾ-1ರವರ ಮನೆ ಹತ್ತಿರದಲ್ಲಿ ಇರುತ್ತದೆ. ದಿ: 24-02-2012 ರಂದು ಅವರ ವಿವಾಹವಾಗಿದ್ದು, ಮದುವೆ ಮಾತುಕತೆ ವೇಳೆಗೆ ಆರೋಪಿತರ ಮನೆಯಿಂದ 8 ಪವನ್ ಚಿನ್ನ ಮತ್ತು 1,30,000/- ವರದಕ್ಷಿಣೆಯನ್ನು ಕೇಳಿದ್ದು, ಸದ್ರಿ ದಿನ ಆರೋಪಿತರು ಇಬ್ಬರು ಕೇಳಿರುತ್ತಾರೆ. ಅವರು ಮಾಡಿದ ವರದಕ್ಷಿಣೆ ಬೇಡಿಕೆಗೆ ಮೊದಲಿಗೆ ಚಾಸಾ-1ರವರ ಕುಟುಂಬಸ್ಥರು ಒಪ್ಪಿಗೆ ಸೂಚಿಸಿಲ್ಲದೇ ಅನಂತರ ಒಪ್ಪಿಗೆ ನೀಡಿರುತ್ತಾರೆ. ಮದುವೆಗೂ ಸ್ವಲ್ಪ ದಿನದ ಮೊದಲು ಆರೋಪಿತರಿಗೆ ಸ್ವಲ್ಪ ಹಣವನ್ನು ನೀಡಿದ್ದು ಅನಂತರ ಚೆಕ್ಕು ಮೂಲಕ ಹಣ ನೀಡಿರುತ್ತಾರೆ. ಮದುವೆಗೆ ಚಿನ್ನಾಭರಣವನ್ನು ಹಾಕಿದ್ದು, ಚಾಸಾ-1ರವರಿಗೆ ಹೆಣ್ಣು ಮಗುವಾದ ನಂತರ ಬೇಸರ ವ್ಯಕ್ತಪಡಿಸಿದ್ದು ಅನಂತರ ಮನಸ್ತಾಪ ಹೆಚ್ಚಾಗಿರುತ್ತದೆ. ಹೆಣ್ಣು ಮಗುವಾದ ಕಾರಣ ಚಾಸಾ-1ರವರು ನಿರ್ಲಕ್ಷ್ಯಸಿ ಹೆಚ್ಚಿನ ವರದಕ್ಷಿಣೆಗೆ ಬೇಡಿಕೆ ಇಟ್ಟಿರುತ್ತಾರೆ. ಹೆಣ್ಣು ಮಗುವಿನೊಂದಿಗೆ ಮನೆಗೆ ಬರುವುದಾದರೆ ಹೆಚ್ಚಿನ ಹಣ ತರಬೇಕಾಗಿ ಹಣ ನೀಡದೆ ಇದ್ದರೆ

ಬರುವುದು ಬೇಡ ಎಂದು ಹೇಳಿದ ಕಾರಣ ಚಾಸಾ-1ರವರಿಗೆ ಹಿಂಸೆ ನೀಡಲು ಪ್ರಾರಂಭಿಸಿರುತ್ತಾರೆ. ಇದರಿಂದ ಮಾನಸಿಕ ಕಿರುಕುಳವಾಗಿರುತ್ತದೆ. ಅನಂತರ ಚಾಸಾ-1ರವರನ್ನು 1ನೇ ಆರೋಪಿ ತವರು ಮನೆಯಲ್ಲಿ ಬಿಟ್ಟು ಹೋಗಿದ್ದು, ವರದಕ್ಷಿಣೆಗಾಗಿ ಪಡೆದಿದ್ದ ಹಣವನ್ನು ಹಿಂದಿರುಗಿಸಿಲ್ಲ.

1ನೇ ಆರೋಪಿಯೊಂದಿಗೆ ಬಾಳಲು ಹೆಚ್ಚಿನ ಹಣವನ್ನು ತರಬೇಕೆಂದು ಬೇಡಿಕೆ ಇಟ್ಟಿದ್ದು, ಆ ಬಗ್ಗೆ ಚಾಸಾ-1ರವರು ನಿರಾಕರಿಸಿರುತ್ತಾರೆ. ಅದಕ್ಕಾಗಿ ವಿಫಲವಾದರೆ ಚಾಸಾ-1 ಮತ್ತು ಮಗುವನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿರುತ್ತಾರೆ ಎಂದು ಚಾಸಾ-1ರವರು ತಿಳಿಸಿರುತ್ತಾರೆ. ಈ ಎಲ್ಲಾ ವಿಚಾರವನ್ನು ಚಾಸಾ-1ರವರು ತಿಳಿಸಿ ನೊಂದುಕೊಂಡಿರುತ್ತಾರೆ. ಈ ಬಗ್ಗೆ ಠಾಣೆಗೆ ಚಾಸಾ-1ರವರು ದೂರು ದಾಖಲಿಸಿರುತ್ತಾರೆ. ಪೊಲೀಸರು ಆತನನ್ನು ಕರೆಯಿಸಿ ವಿಚಾರಿಸಿದ ನಂತರ 1ನೇ ಆರೋಪಿ ಸ್ವಲ್ಪ ದಿನ ಬಾಂಬೆಗೆ ತನ್ನೊಂದಿಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲೂ ಆಕೆಗೆ ಹಿಂಸಿಸಿರುವುದಾಗಿ ಆಕೆ ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ಸಂಘಟನೆಯಿಂದಲೂ ಆಕೆಗೆ ಸಹಕರಿಸಿದ್ದು ಈ ವಿಚಾರವಾಗಿ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ಚಾಸಾ-1 ಮತ್ತು ನಾನು ಒಂದೇ ಜಾತಿಗೆ ಸೇರಿದ್ದು ನೆರೆಮನೆಯವರಾಗಿರುತ್ತೇವೆ ಆದ್ದರಿಂದ ಸಂಬಂಧ. 1ನೇ ಆರೋಪಿ ಮುಂಬೈಯಲ್ಲಿ ಕೆಲಸ ಮಾಡಿಕೊಂಡಿದ್ದರು. ಮದುವೆಯ ಮಾತುಕತೆಗೆ ನಾನು ಭಾಗವಹಿಸಿಲ್ಲ. ಆದರೆ ಚಾಸಾ-1, 2, ಆಕೆಯ ಕುಟುಂಬಸ್ಥರು ನನಗೆ ವಿಚಾರ ತಿಳಿಸಿರುತ್ತಾರೆ. ನಾನು ಮದುವೆಗೆ ಹೋಗಿದ್ದೆ ಆದರೆ ಚಿನ್ನಾಭರಣವನ್ನು ಎಲ್ಲಿ ಖರೀದಿಸಿದ್ದರು ಎಂದು ನನಗೆ ತಿಳಿದಿಲ್ಲ. ಚಿನ್ನಾಭರಣಗಳು ಎಷ್ಟು ಬೆಲೆ ಬಾಳುತ್ತಿತ್ತು ಎಂದು ನನಗೆ ತಿಳಿದಿಲ್ಲ. ವರದಕ್ಷಿಣೆಯನ್ನು ಕೊಡುವಾಗ ಅಥವಾ ತೆಗೆದುಕೊಳ್ಳುವಾಗ ನಾನು ಇರಲಿಲ್ಲ. 1ನೇ ಆರೋಪಿ ಸುಮಾರು ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ ಯಾವಾಗ ಎಂದು ತಿಳಿದಿಲ್ಲ. ಆತ ಮೃತಪಟ್ಟಾಗ ಎಷ್ಟು ವಯಸ್ಸು ಆಗಿತ್ತು ಎಂದು ನನಗೆ ತಿಳಿದಿಲ್ಲ. ಆತ ಕಾಯಿಲೆಯಿಂದ ಬಳಲುತ್ತಿದ್ದ ಆದರೆ ಏನು ಕಾಯಿಲೆ ಎಂದು ತಿಳಿದಿಲ್ಲ. ಆತ ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದರು. ಆತನ ಆರೈಕೆಯನ್ನು 2ನೇ ಆರೋಪಿ ಮಾಡಿರುತ್ತಾರೆ ಎಂದರೆ

ಸರಿ. ಆದ್ದರಿಂದ 1ನೇ ಆರೋಪಿಯ ಮೇಲೆ 2ನೇ ಆರೋಪಿಗೆ ಪ್ರೀತಿ ಇತ್ತು ಎಂದರೆ ಸರಿ. ವೈದ್ಯಕೀಯ ಚಿಕಿತ್ಸೆಗಾಗಿ ಹೆಚ್ಚಿನ ಹಣವನ್ನು ಆಕೆ ಖರ್ಚು ಮಾಡಿದ್ದಾರೆ ಎಂದರೆ ಸರಿ.

ಮದುವೆಯಾದ ನಂತರ ಚಾಸಾ-1ರವರು ಗಂಡನ ಮನೆಯಾದ ಮೊವಾಡಿಯಲ್ಲಿ ವಾಸವಾಗಿದ್ದರು. ಚಾಸಾ-1 ಮತ್ತು 1ನೇ ಆರೋಪಿ ಮುಂಬೈಯಲ್ಲಿ ಸ್ವಲ್ಪ ದಿನಗಳ ಕಾಲ ಒಟ್ಟಾಗಿ ಜೀವನ ನಡೆಸಿರುತ್ತಾರೆ. ಅವರು ಎಲ್ಲಿ ವಾಸವಿದ್ದರು ಮತ್ತು ಹೇಗೆ ಜೀವನ ನಡೆಸುತ್ತಿದ್ದರು ಎಂದು ನಾನು ನೋಡಿಲ್ಲ. ಚಾಸಾ-1ರವರು 1ನೇ ಆರೋಪಿಯ ವರ್ತನೆಯಿಂದ ಯಾವುದಾದರೂ ಕಾರಣಕ್ಕಾಗಿ ವೈದ್ಯಕೀಯ ಚಿಕಿತ್ಸೆಯನ್ನು ಪಡೆದಿರುವ ಬಗ್ಗೆ ನನಗೆ ತಿಳಿದಿಲ್ಲ.

ಚಾಸಾ-1ರವರ ಹೆಣ್ಣು ಮಗು ಯಾವಾಗ ಜನಿಸಿದ್ದು ಎಂದು ನನಗೆ ತಿಳಿದಿಲ್ಲ. ಹೆಣ್ಣು ಮಗು ಹುಟ್ಟಿದ್ದರಿಂದ ಬೇಜಾರಾಗಿದೆ ಎಂದು ಚಾಸಾ-1ರವರು ತಿಳಿಸಿರುತ್ತಾರೆ. ಸದ್ರಿ ಮಗು ಎಲ್ಲಿ ಜನಿಸಿತ್ತು ಎಂದು ನನಗೆ ತಿಳಿದಿಲ್ಲ. ಈ ಎಲ್ಲಾ ವಿಚಾರವಾಗಿ ನಾನು ಆರೋಪಿತರ ಬಳಿ ಯಾವುದೇ ಮಾತುಕತೆ ನಡೆಸಿಲ್ಲ. ನನಗೆ ಅವಶ್ಯಕತೆ ಇಲ್ಲದ ಕಾರಣ ಅವರ ಬಳಿ ಮಾತನಾಡಿಲ್ಲ. ನಮ್ಮದು Shtree ಶಕ್ತಿ ಸಂಘ. ಅದರ ವ್ಯಾಪ್ತಿಗೆ ಕೌಟುಂಬಿಕ ಕಲಹ ಬರುವುದಿಲ್ಲ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿಸಿದ ಯಾವುದೇ ವಿಚಾರವನ್ನು ಬರವಣಿಗೆ ಮಾಡಿಲ್ಲ.

ನಾನು ಪೊಲೀಸ್ ಠಾಣೆಗೆ ಚಾಸಾ-1ರವರು ದೂರು ನೀಡುವ ವೇಳೆಗೆ ಹೋಗಿರುತ್ತೇನೆ. ಸದ್ರಿ ಪೊಲೀಸ್ ಠಾಣೆಯ ಠಾಣಾಧಿಕಾರಿ ಚಾಸಾ-19 ರವರು ನನಗೆ ಪರಿಚಯಸ್ಥರು. ನಿಪಿ-1ನ್ನು ಪೊಲೀಸ್ ಠಾಣೆಯಲ್ಲಿಯೇ ಬರೆದಿರುತ್ತಾರೆ. ಪೊಲೀಸರು ನನ್ನನ್ನು ಯಾವುದೇ ವಿಚಾರಣೆ ಮಾಡಿಲ್ಲ. ಹಣದ ಕೊಟ್ಟ ಬಗ್ಗೆ ನನಗೆ ಚಾಸಾ-1ರವರು ತಿಳಿಸಿರುತ್ತಾರೆ. 1ನೇ ಆರೋಪಿ ಏನು ಕೆಲಸ ಮಾಡುತ್ತಿದ್ದರು ಎಂದು ತಿಳಿದಿಲ್ಲ. 1ನೇ ಆರೋಪಿ ಎಲ್ಲಿ ಮೃತಪಟ್ಟರು ಎಂದು ನನಗೆ ತಿಳಿದಿಲ್ಲ. ಆ ವೇಳೆಗೆ ಆತನೊಂದಿಗೆ ಯಾರೆಲ್ಲಾ ಇದ್ದರು ಎಂದು ನನಗೆ ತಿಳಿದಿಲ್ಲ.

2ನೇ ಆರೋಪಿಯ ಪರಿಚಯವಿದೆ. ಆಕೆ ಒಳ್ಳೆಯ ಸ್ವಭಾವದವರು ಎಂದರೆ ಸರಿ. ಆಕೆ ಚಾಸಾ-1ರವರಿಗೆ ಯಾವುದೇ ತೊಂದರೆ ನೀಡಿರುವುದನ್ನು ನಾನು ಪ್ರತ್ಯಕ್ಷವಾಗಿ ಕಂಡಿಲ್ಲ ಎಂದರೆ ಸರಿ. ಆದ್ದರಿಂದ

2ನೇ ಆರೋಪಿ ವಿರುದ್ದ ನನ್ನಲ್ಲಿ ಯಾವುದೇ ಆರೋಪಿಣೆ ಇಲ್ಲ ಎಂದರೆ ಸರಿ. ನನಗೆ ಯಾವುದೇ ವಿಚಾರ ತಿಳಿಯದಿದ್ದರೂ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**